ಕನ್ನಡಪ್ರಭ

Online Newspaper Clipping Service
Dtd-Monday, 22nd, June- 2020

Page No.03

# ಕೋಲಾರ: 7 ಖಾಸಗಿ ಆಸ್ಪತ್ರೆ ಆಯ್ಕೆ

ಕೋಲಾರ: ಜಿಲ್ಲೆಯಲ್ಲಿ ಕೊರೋನಾ ಸೋಂಕಿತರ ಚಿಕಿತ್ಸೆಗಾಗಿ 7 ಖಾಸಗಿ ಆಸ್ಪತ್ರೆಗಳನ್ನು ಸರ್ಕಾರ ಗುರ್ತಿಸಿದೆ.

ಜಿಲ್ಲೆಯಲ್ಲಿ ಕೋಲಾರದ ಹೊರವಲಯದಲ್ಲಿರುವ ಆರ್.ಎಲ್. ಜಾಲಪ್ಪ ಆಸ್ಪತ್ರೆಯಲ್ಲಿರುವ ನಾರಾಯಣ ಹೃದಯಾಲಯ ಮತ್ತು ಆರ್.ಎಲ್. ಜಾಲಪ್ಪ ರಿಸರ್ಚ್ ಸೆಂಟರ್, ಮುಳಬಾಗಿಲಿನ ಪೂರ್ಣಿಮಾ ಆಸ್ಪತ್ರೆ, ಕೋಲಾರದ ನ್ಯೂ ಕಾಮಧೇನು ಆಸ್ಪತ್ರೆ ಮತ್ತು ಕೋಟೆಯಲ್ಲಿರುವ ಗೌರವ್ ಆಸ್ಪತ್ರೆ, ಮಾಲೂರಿನ ಸಂಜನ ಆಸ್ಪತ್ರೆ, ಕೆಜಿಎಫ್ ಬೆಮೆಲ್ ನಗರದ ಎರಡು ಆಸ್ಪತ್ರೆಗಳನ್ನು ಗುರ್ತಿಸಲಾಗಿದೆ.

ಖಾಸಗಿ ಆಸ್ಪತ್ರೆಗಳಲ್ಲಿ ಸರ್ಕಾರದ ನಿಯಮಾವಳಿ ಪ್ರಕಾರ ಪ್ರತಿಯೊಬ್ಬ ಸೋಂಕಿತರ ಚಿಕಿತ್ಸೆಗೂ ಹಣ ನಿಗದಿಪಡಿಸಲಾಗುವುದು ಅದರಂತೆ ಹಣವನ್ನು ಸರ್ಕಾರ ಪಾವತಿ ಮಾಡುವುದು.

> ಜಿಲ್ಲೆಯಲ್ಲಿ 7 ಖಾಸಗಿ ಆಸ್ಪತ್ರೆಗಳನ್ನು ಕೋವಿಡ್ 19 ಚಿಕಿತ್ಸೆಗಾಗಿ ಗುರ್ತಿಸಲಾಗಿದೆ, ಸರ್ಕಾರದಿಂದ ಅಧಿಕೃತವಾಗಿ ನಮಗೆ ಇದುವರೆಗೂ ಯಾವುದೇ ಮಾಹಿತಿ ಬಂದಿರುವುದಿಲ್ಲ ಅದು ಬಂದ ಕೂಡಲೇ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು, ಸೋಂಕಿತರನ್ನು ಖಾಸಗಿ ಆಸ್ಪತ್ರೆಗಳಲ್ಲಿಯೂ ಚಿಕಿತ್ಸೆ ಕೊಡಿಸಲಾಗುವುದು ಸರ್ಕಾರದ ನಿಯಮಾವಳಿ ಗೊತ್ತು ಪಡಿಸಿರುವ ಚಿಕಿತ್ಸಾ ವೆಚ್ಚವನ್ನು ಖಾಸಗಿ ಆಸ್ಪತ್ರೆಗಳಿಗೆ ಭರಿಸಲಾಗುವುದು.
>
> • ಡಾ.ವಿಜಯಕುಮಾರ್ ಡಿಎಚ್‌ಒ

ಪ್ರತಿಯೊಬ್ಬ ರೋಗಿಗೂ ದಿನವೊಂದಕ್ಕೆ 5,200 ರೂಗಳನ್ನು ನಿಗದಿಪಡಿಸಲಾಗಿದೆ.

**ಸರ್ಕಾರಿ ಆಸ್ಪತ್ರೆಯಲ್ಲಿ 200 ಹಾಸಿಗೆ:** ಪ್ರಮುಖವಾಗಿ ಕೋಲಾರ ಜಿಲ್ಲಾ ಕೇಂದ್ರದಲ್ಲಿರುವ ಎಸ್‌ಎನ್‌ಆರ್ ಆಸ್ಪತ್ರೆಯನ್ನು ಕೋವಿಡ್-19 ಆಸ್ಪತ್ರೆಯೆಂದು ಘೋಷಣೆ ಮಾಡಿ ಆಸ್ಪತ್ರೆಯಲ್ಲಿ 200 ಮಂದಿ ಸೋಂಕಿತರಿಗೆ ಚಿಕಿತ್ಸೆ ಕೊಡಲು ಕ್ರಮಕೈಗೊಳ್ಳಲಾಗಿದೆ. ಇದರಲ್ಲಿ 40 ಮಂದಿಗೆ ತೀವ್ರ ನಿಗಾ ಘಟಕ, 70 ಸೋಂಕಿತರು ಹಾಗು 90 ಮಂದಿ ಶಂಕಿತರಿಗೆ ಹಾಸಿಗೆ ವ್ಯವಸ್ಥೆ ಮಾಡಲಾಗಿದೆ.

ಜಿಲ್ಲೆಯಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿದೆ, 32 ಸಕ್ರಿಯ ಪ್ರಕರಣಗಳಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ನೀಡಲಾಗುತ್ತಿದೆ, ಒಬ್ಬರು ಮಾತ್ರ ಐಸಿಯುನಲ್ಲಿ ಇದ್ದು ಉಳಿದ ಎಲ್ಲರಿಗೂ ಸಾಮಾನ್ಯ ರೋಗಿಗಳ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು ಎಲ್ಲರೂ ಚೆನ್ನಾಗಿದ್ದಾರೆ ಎಂದು ಜಿಲ್ಲಾ ಸರ್ಜನ್ ಡಾ.ನಾರಾಯಣಸ್ವಾಮಿ ತಿಳಿಸಿದರು.